148(344) ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರಾದ್): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹೈದ್ರಾಬಾದ್ ಕರ್ನಾಟಕ ಪ್ರದೇಶದ ವ್ಯಾಪ್ತಿಯಲ್ಲಿ ಮತ್ತು ವಿಶೇಷವಾಗಿ ಬೀದರ್ ಜಿಲ್ಲೆಯಲ್ಲಿ 2006ರ ಮಾರ್ಚ್ ತಿಂಗಳಿನಲ್ಲಿ ಬಿದ್ದ ಅಕಾಲಿಕ ಆಲಿಕಲ್ಲು ಮಳೆಯಿಂದಾಗಿ ನಷ್ಟವಾಗಿರುವ ಆಸ್ತಿಪಾಸ್ತಿಗಳ ಮೊತ್ತವೆಷ್ಟು ಹಾಗೂ ಸಾವಗೀಡಾದ ಜನಜಾನುವಾರುಗಳ ವಿವರಗಳೆನು: (ವಿಧಾನ ಸಭಾ ಕ್ಷೇತ್ರವಾರು ಪೂರ್ಣ ವಿವರಗಳನ್ನು ಒದಗಿಸುವುದು);

ಆ) ಈ ಅಕಾಲಿಕ ಮಳೆಯಿಂದ ಉಂಟಾದ ಆಸ್ತಿಪಾಸ್ತಿ ನಷ್ಟ ಹಾಗೂ ಸಾವಗೀಡಾಗಿರುವ ಜನಜಾನುವಾರುಗಳಿಗೆ ಇಲ್ಲಿಯವರೆವಿಗೆ ಎಷ್ಟು ಮೊತ್ತದ ಪರಿಹಾರವನ್ನು ವಿತರಣೆ ಮಾಡಲಾಗಿದೆ;

ಇ) ಅಕಾಲಿಕ ಮಳೆಯಿಂದ ಉಂಟಾದ ಭಾರೀ ನಷ್ಟವನ್ನು ಸರಿಯಾಗಿ ಸಮೀಕ್ಷೆ ಮಾಡದೇ ಕೇವಲ ಸ್ವಲ್ಪ ಪ್ರಮಾಣದಲ್ಲಿ ಪರಿಹಾರವನ್ನು ವಿತರಣೆ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ಯಾವ ಕ್ರಮವನ್ನು ಕೈಗೊಳ್ಳುವುದು?

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು):

ಅ) (i) ಹೈದ್ರಾಬಾದ್ ಕರ್ನಾಟಕ ಪ್ರದೇಶದ ವ್ಯಾಪ್ತಿಯಲ್ಲಿ ಬಿದ್ದ ಅಕಾಲಿಕ ಮಳೆಯಿಂದ ಒಟ್ಟು ರೂ.214.36 ಲಕ್ಷದಷ್ಟು ಹಾನಿಯಾಗಿರುತ್ತದೆ.

(ii) ಬೀದರ್ ಜಿಲ್ಲೆಯಲ್ಲಿ ನಷ್ಟವಾಗಿರುವ ಅಂದಾಜು ಆಸ್ತಿಪಾಸ್ತಿಗಳ ವಿವರ ಕೆಳಕಂಡಂತಿದೆ.

1) ಬೆಳೆಹಾನಿ	ರೂ.132–00 ಲಕ್ಷ
2) ಭಾಗಶಃ ಮನೆಹಾನಿ	ರೂ. 10–00 ಲಕ್ಷ
3) ಜಾನುವಾರುಗಳ ಹಾನಿ	ರೂ. 5–00 ಲಕ್ಷ
ಒಟ್ಟು ರೂ.	147–00 ಲಕ್ಷ

ಆ) ಸರ್ಕಾರದಿಂದ 25.00 ಲಕ್ಷ ಬಿಡುಗಡೆ ಮಾಡಿದೆ. ರೂ.14.53 ಲಕ್ಷಗಳಷ್ಟು ಪರಿಹಾರ ಮೊತ್ತ ವಿತರಿಸಿದೆ.

ಇ) ಎನ್.ಸಿ.ಸಿ.ಎಫ್/ಸಿ.ಆರ್.ಎಫ್.ಮಾರ್ಗ ಸೂಚಿಗಳ ಪ್ರಕಾರ ಪರಿಹಾರ ವಿತರಿಸಲಾಗಿದೆ.

ಈ) ಉದ್ಭವಿಸುವುದಿಲ್ಲ.

149(345) ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರಾದ): ಮಾನ್ಯ ಉಪ ಮುಖ್ಯಮಂತ್ರಿಗಳು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಅಬ್ಕಾರಿ ಗುತ್ತಿಗೆದಾರರಿಂದ ಇಲ್ಲಿಯವರೆವಿಗೆ ಸರ್ಕಾರಕ್ಕೆ ಬರಬೇಕಾದ ಬಾಕಿ ಹಣವೆಷ್ಟು ಹಾಗೂ ಈ ಹಣ ಎಷ್ಟು ಅವಧಿಯಿಂದ ಬಾಕಿ ಇದೆ: (ಜಿಲ್ಲಾವಾರು ವಿವರಗಳನ್ನು ಒದಗಿಸುವುದು);

ಆ) ದೀರ್ಘ ಅವಧಿಯಿಂದ ಬಾಕಿ ಇರುವ ಹಣವನ್ನು ವಸೂಲು ಮಾಡಲು ಸರ್ಕಾರವು ಇಲ್ಲಿಯವರೆವಿಗೆ ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಳ್ಳುವಲ್ಲಿ ವಿಳಂಬ ನೀತಿಯನ್ನು ಅನುಸರಿಸುತ್ತಿರುವುದು ನಿಜವೇ: